# ನಿಮ್ಮೊಡನೆ

## ಕೊಪ್ಪಳದ ಕನ್ನಡಿಯಲ್ಲಿ ಕಂಡ ಕನ್ನಡದ ದುರವಸ್ಥೆ ಕನ್ನಡ ಕಲಿಕೆಯಲ್ಲಿ ಕನ್ನಡದ ಮಕ್ಕಳೇ ಹಿಂದೆ

> ಕನ್ನಡದ ಹೆಸರಿನಲ್ಲಿ ನಡೆಯುವ ಜಾತ್ರೆಗಳು ಸುದ್ದಿಯಾಗುತ್ತಿವೆ. ವರ್ತಮಾನದ ಹೃದಯದ್ರಾವಕಗಳು ಹಿನ್ನೆಲೆಗೆ ಸರಿಯುತ್ತಿವೆ. ಕರ್ನಾಟಕದ ಮಕ್ಕಳಿಗೆ ಮಾತೃಭಾಷೆಯಲ್ಲಿಯೇ ಓದಲು–ಬರೆಯಲು ಸರಿಯಾಗಿ ಬಾರದೆ ಹೋದರೆ ನಮ್ಮ ಸರ್ಕಾರಕ್ಕೆ, ಶಿಕ್ಷಣ ಇಲಾಖೆಗೆ ನಾಚಿಕೆ ಆಗಬೇಕಲ್ಲವೆ?

ಕನ್ನಡ ಓದಲು, ಬರೆಯಲು ಕಲಿತ ವಿದೇಶೀಯರು ಆಗಾಗ ಸುದ್ದಿಯಾಗುತ್ತಿರುತ್ತಾರೆ. ಸದ್ಯಕ್ಕೆ ಸುದ್ದಿಯಲ್ಲಿರುವುದು, ಕರ್ನಾಟಕದಲ್ಲಿಯೇ ಹುಟ್ಟಿ ಬೆಳೆದರೂ ಮಾತೃಭಾಷೆಯಲ್ಲಿ ಓದಲು ಹಾಗೂ ಬರೆಯಲು ಸರಿಯಾಗಿ ಬಾರದ ಕನ್ನಡ ಕಂದಮ್ಮಗಳು.

ಕೊಪ್ಪಳ ಜಿಲ್ಲೆಯಿಂದ ಪ್ರಕಟವಾಗಿರುವ ವರದಿಯನ್ನು ಗಮನಿಸಿ: ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಓದುತ್ತಿರುವ ಹತ್ತನೇ ತರಗತಿಯ ಸುಮಾರು 7 ಸಾವಿರ ವಿದ್ಯಾರ್ಥಿಗಳಿಗೆ ಕನ್ನಡ ಸರಿಯಾಗಿ ಓದಲು, ಬರೆಯಲು ಬರುವುದಿಲ್ಲ; ಗಣಿತದ ಪ್ರಾಥಮಿಕ ತಿಳಿವಳಿಕೆಯೂ ಇಲ್ಲ. ಇಂಥ ವಿದ್ಯಾರ್ಥಿಗಳನ್ನು ಪರೀಕ್ಷೆಯಲ್ಲಿ ಉತ್ತೀರ್ಣರಾಗುವಂತೆ ಸಿದ್ಧಗೊಳಿಸುವುದು ಹೇಗೆ ಸಾಧ್ಯ? ಇದು ಕೊಪ್ಪಳ ಜಿಲ್ಲೆಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಳಲು.

ಎಸ್ಸೆಸ್ಸೆಲ್ಸಿ ಫಲಿತಾಂಶವನ್ನು ಉತ್ತಮಗೊಳಿಸುವಂತೆ ಶಿಕ್ಷಕರ ಮೇಲೆ ಅಧಿಕಾರಿಗಳು ಒತ್ತಡ ಹೇರುತ್ತಿರುತ್ತಾರೆ. ಆದರೆ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಭಾಷೆ ಹಾಗೂ ಗಣಿತದ ಪ್ರಾಥಮಿಕ ಸಂಗತಿಗಳೇ ತಿಳಿಯದಿರುವಾಗ ಅವರನ್ನು ಪರೀಕ್ಷೆಗೆ ಸಜ್ಜುಗೊಳಿಸುವುದು ಹೇಗೆ ಎನ್ನುವುದು ಶಿಕ್ಷಕರ ಸಂಘದ ವಾದ. ಏಳನೇ ತರಗತಿಯಲ್ಲೂ ಶೇ. 30ರಷ್ಟು ವಿದ್ಯಾರ್ಥಿಗಳಿಗೆ ಓದು, ಬರಹ ಗೊತ್ತಿಲ್ಲ, ಸಂಖ್ಯಾಜ್ಞಾನದ ಅರಿವಿಲ್ಲ. ಅಂಥವರನ್ನು ತೇರ್ಗಡೆಗೊಳಿಸಿ ಪ್ರೌಢಶಾಲೆಗೆ ಕಳುಹಿಸಲಾಗುತ್ತಿದೆ. ಪ್ರಾಥಮಿಕ ಶಿಕ್ಷಣದ ಬುನಾದಿಯೇ ಅಸ್ಥಿರವಾಗಿರುವಾಗ, ಪ್ರೌಢಶಾಲೆಯ ನಿರ್ಣಾಯಕ ಹಂತದಲ್ಲಿ ಅದನ್ನು ಸರಿಮಾಡುವುದು ಹೇಗೆ ಸಾಧ್ಯ ಎನ್ನುವ ಶಿಕ್ಷಕರ ಪ್ರಶ್ನೆಗೆ ಉತ್ತರಿಸುವವರು ಯಾರು?

ಶಿಕ್ಷಣ ಕ್ಷೇತ್ರದ ಅವ್ಯವಸ್ಥೆ ಕೊಪ್ಪಳ ಜಿಲ್ಲೆಗೆ ಸೀಮಿತವಾದ ವಿದ್ಯಮಾನವೇನೂ ಅಲ್ಲ. ರಾಜ್ಯದ ಕೆಲವು ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟ ತಕ್ಕಮಟ್ಟಿಗೆ ಉತ್ತಮವಾಗಿ ಇರಬಹುದಾದರೂ, ಮಾತೃಭಾಷಾ ಕಲಿಕೆಯಲ್ಲಿಯೇ ಹಿಂದುಳಿದಿರುವ ಹಾಗೂ ಗಣಿತ–ಇಂಗ್ಲಿಷ್ ಎಂದರೆ ಗಾಬರಿಯಾಗುವ ಮಕ್ಕಳು ಎಲ್ಲೆಡೆಯೂ ಇದ್ದಾರೆ. ದುರದೃಷ್ಟವಶಾತ್, ನಮ್ಮ ಮಕ್ಕಳು ಕನ್ನಡದಿಂದ ದೂರವಾಗುತ್ತಿರುವುದರ ಬಗ್ಗೆ ಗಂಭೀರ ಚರ್ಚೆಗಳೇ ನಡೆಯುತ್ತಿಲ್ಲ.

ಕಲಿಕೆಯಲ್ಲಿ ಮಕ್ಕಳು ಹಿಂದುಳಿದಿರುವುದಕ್ಕೆ ಮೇಲ್ನೋಟಕ್ಕೆ ಎರಡು ಕಾರಣಗಳು ಕಾಣಿಸುತ್ತವೆ. ಒಂದು, ವರ್ಷದಿಂದ ವರ್ಷಕ್ಕೆ ಕನ್ನಡ ಶಾಲೆಗಳು ದುರ್ಬಲಗೊಳ್ಳುತ್ತಿರುವುದು; ಅದರ ಬಗ್ಗೆ ತಲೆ ಕೆಡಿಸಿಕೊಳ್ಳದ ಸರ್ಕಾರ, ಖಾಸಗಿ ಶಾಲೆಗಳ ಬಲವರ್ಧನೆಗೆ ಪರೋಕ್ಷ ನೆರವು ನೀಡುತ್ತಿರುವುದು. ಎರಡನೆಯದು, ಮಕ್ಕಳಿಗೆ ಪಾಠ ಹೇಳಬೇಕಾದ ಶಿಕ್ಷಕರನ್ನು ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿರುವುದು. ಮಕ್ಕಳನ್ನು ಶಾಲೆಗೆ ಕರೆತರುವುದು, ಶಾಲೆಗೆ ಬಂದಿರುವ ಮಕ್ಕಳಿಗೆ ವಿಶೇಷ ಕಾಳಜಿ ನೀಡುವುದು, ಅವರ ಕಲಿಕೆಯ ಬಗ್ಗೆ ಎಚ್ಚರಿಕೆ ವಹಿಸುವುದು ಶಿಕ್ಷಕರ ಹೊಣೆಗಾರಿಕೆ ಎಂದು ಅಧಿಕಾರಿಗಳು ಹೇಳುತ್ತಾರೆ. ಆದರೆ, ಶಿಕ್ಷಕರ ಪೂರ್ಣ ಸಮಯ ಮಕ್ಕಳಿಗೆ ದೊರೆಯುವಂತೆ ಮಾಡುವಲ್ಲಿ ಶಿಕ್ಷಣ ಇಲಾಖೆ ವಿಫಲವಾಗಿದೆ.

ಅಪೌಷ್ಟಿಕ ಮಕ್ಕಳಂತೆ ಮೂಲಭೂತ ಸೌಕರ್ಯಗಳ ಕೊರತೆಯಿಂದ ಬಳಲುತ್ತಿರುವ ಅನೇಕ ಸರ್ಕಾರಿ ಶಾಲೆಗಳು ಸಾಕುಪ್ರಾಣಿಗಳನ್ನು ಕೂಡಿ ಹಾಕುವ ದೊಡ್ಡಿಗಳಂತಿವೆ. ಸರ್ಕಾರಿ ಶಾಲೆಗಳನ್ನು ಸುಧಾರಿಸುವ, ಇಲ್ಲವೇ ಸಮಾನ ಶಿಕ್ಷಣನೀತಿಯನ್ನು ರೂಪಿಸುವ ಇಚ್ಛಾಶಕ್ತಿಯನ್ನು ಈವರೆಗಿನ ಯಾವ ಸರ್ಕಾರವೂ ಪ್ರದರ್ಶಿಸಿಲ್ಲ. ಇತ್ತೀಚಿನ ವರ್ಷಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲೂ ಖಾಸಗಿ ಶಾಲೆಗಳು ಬಲಗೊಳ್ಳುತ್ತಿರುವುದು ಸರ್ಕಾರಿ ಶಿಕ್ಷಣ ವ್ಯವಸ್ಥೆ ಶಿಥಿಲಗೊಂಡಿರುವುದಕ್ಕೆ ನಿದರ್ಶನವಾಗಿದೆ. ಚುನಾವಣೆ, ಗಣತಿ, ಆರೋಗ್ಯ ಜಾಗೃತಿ ಚಟುವಟಿಕೆಗಳು ಹಾಗೂ ವರ್ಷದಲ್ಲಿ ಹತ್ತಾರು ತರಬೇತಿಗಳು ಸೇರಿದಂತೆ ವಿವಿಧ ಕಾರಣಗಳಿಂದಾಗಿ ಶಿಕ್ಷಕರು ಶಾಲೆಗಳಿಂದ ಹೊರಗುಳಿಯುತ್ತಿರುವುದು ಮಕ್ಕಳ ಕಲಿಕೆಯ ಹಿನ್ನಡೆಗೆ ಮತ್ತೊಂದು ಕಾರಣ. ಪಠ್ಯೇತರ ಚಟುವಟಿಕೆಗಳಿಗೆ ಶಿಕ್ಷಕರನ್ನು ವರ್ಷಪೂರ್ತಿ ನಿಯೋಜಿಸುವ ಮೂಲಕ ಸರ್ಕಾರವೇ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳ ಕಲಿಕೆಯ ಹಕ್ಕುಗಳನ್ನು ಮೊಟಕುಗೊಳಿಸಿದೆ.

‘ಕಡ್ಡಾಯ ಪ್ರಾಥಮಿಕ ಶಿಕ್ಷಣ’ ಎನ್ನುವುದು ದಾಖಲೆಗಳಲ್ಲಷ್ಟೇ ಅನುಷ್ಠಾನಕ್ಕೆ ಬಂದಿದೆ. ಶಾಲೆಗೆ ಬಾರದಿದ್ದರೂ ಹಾಜರಾತಿ ಪುಸ್ತಕಗಳಲ್ಲಿ ವಿದ್ಯಾರ್ಥಿಗಳನ್ನು ಕಾಣಿಸುವ ಪರಿಪಾಟ ಅನೇಕ ಕಡೆಗಳಲ್ಲಿವೆ. ಕಲಿಕೆಯಲ್ಲಿ ಹಿಂದುಳಿದಿದ್ದರೂ ಮಕ್ಕಳನ್ನು ಉತ್ತೀರ್ಣಗೊಳಿಸಲಾಗುತ್ತಿದೆ. ಜವಾಬ್ದಾರಿಯನ್ನು ಸಾಗಹಾಕುವ ಮನಸ್ಥಿತಿ ಶಿಕ್ಷಕರಲ್ಲಿ ರೂಪುಗೊಳ್ಳುವ ಪರಿಸ್ಥಿತಿಯನ್ನು ಸರ್ಕಾರವೇ ಸೃಷ್ಟಿಸಿದೆ. ಸಹಾನುಭೂತಿಯನ್ನೇ ಏಣಿಯಾಗಿಸಿಕೊಂಡು ಹತ್ತನೇ ತರಗತಿಯವರೆಗೂ ಬರುವ ಮಕ್ಕಳು ಎಸ್ಸೆಸ್ಸೆಲ್ಸಿಯಲ್ಲಿ ಆಘಾತ ಅನುಭವಿಸುತ್ತಾರೆ. ಪ್ರಾಥಮಿಕ ಶಿಕ್ಷಣ ರೋಗಗ್ರಸ್ತವಾಗಿರುವುದರ ಪರಿಣಾಮ ಕನ್ನಡ ಭಾಷೆಯ ಮೇಲೆಯೂ ಸಹಜವಾಗಿಯೇ ಆಗುತ್ತಿದೆ.

ಕನ್ನಡದ ದುರವಸ್ಥೆಯನ್ನು ಸೂಚಿಸುವಂತಿರುವ ಈ ವಿದ್ಯಮಾನ ವರದಿಯಾದ ಆಸುಪಾಸಿನಲ್ಲೇ 87ನೇ ಕನ್ನಡ ಸಾಹಿತ್ಯ ಸಮ್ಮೇಳನ ಮಂಡ್ಯದಲ್ಲಿ ಅದ್ದೂರಿಯಾಗಿ ನಡೆದಿದೆ. ಕನ್ನಡ ಜಾತ್ರೆಯ ಹೆಸರಿನಲ್ಲಿ ನಡೆದ ಸಂಭ್ರಮಕ್ಕೆ ಸರ್ಕಾರ ಇಪ್ಪತ್ತೈದು ಕೋಟಿ ರೂಪಾಯಿ ಅನುದಾನ ನೀಡಿದೆ. ಒಂದೆಡೆ ಮಕ್ಕಳನ್ನು ಕನ್ನಡದಿಂದ ದೂರ ಮಾಡುತ್ತ, ಇನ್ನೊಂದೆಡೆ ಕನ್ನಡದ ಜಾತ್ರೆ ನಡೆಸಿದರೆ ಅದರಿಂದ ನುಡಿಯೂ ಬೆಳೆಯುವುದಿಲ್ಲ, ನಾಡಿನ ಅಭಿವೃದ್ಧಿಯೂ ಸಾಧ್ಯವಿಲ್ಲ.

■ ರಘುನಾಥ ಚ.ಹ.



ಈಶ್ವರ್